KASM700038392025

Presented on : 16-09-2025
Registered on : 16-09-2025
Decided on : 03-08-2026
Duration : 0Y-10M-17D

**I ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯದಲ್ಲಿ., ಸೊರಬ**

**ಉಪಸ್ಥಿತರುಃ** ಶ್ರೀ ರಾಜು .ಕೃ. ಶೇಡಬಾಳ್‌ಕರ್
ಬಿ.ಕಾಂ., ಎಲ್.ಎಲ್.ಬಿ.
ಸಿ/ಸಿ I ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂಡಾಧಿಕಾರಿಗಳು ಸೊರಬ.

ದಿನಾಂಕಃ 03 ನೇ ಆಗಸ್ಟ್-2026

**ಕ್ರಿಮಿನಲ್ ಮೊಕದ್ದಮೆ ಸಂಖ್ಯೆ: 3064/2025**

**ಪಿರ್ಯಾದಿದಾರರು** ಃ ಆನವಟ್ಟಿ ಪೊಲೀಸ್ ಠಾಣೆ
(ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು)

**- ವಿರುದ್ಧ -**

**ಆರೋಪಿತರುಃ**

1. ಮೃತ್ಯುಂಜಯಗೌಡ ಬಿನ್ ಸದಾಶಿವಗೌಡ,
ವಯಸ್ಸುಃ 53 ವರ್ಷ,
2. ಜೇಷ್ಟ ಬಿನ್ ಮೃತ್ಯುಂಜಯ ಗೌಡ,
ವಯಸ್ಸುಃ 21 ವರ್ಷ,
1 ಮತ್ತು 2 ನೇ ಆರೋಪಿತರು
ವಾಸಃ ಸಂತೊಳ್ಳಿ ಗ್ರಾಮ,
ಶಿರಸಿ ತಾಲ್ಲೂಕು, ಉತ್ತರಕನ್ನಡ ಜಿಲ್ಲೆ.

3. ಈರಯ್ಯ ಬಿನ್ ದುಂಡಯ್ಯ,
ವಯಸ್ಸುಃ 50 ವರ್ಷ,
ವಾಸಃ ಸೂರನಗಿ ಗ್ರಾಮ,
ಸೊರಬ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.

4. ಕಾವ್ಯ ಕೋಂ ಮೃತ್ಯುಂಜಯ ಗೌಡ,
ವಯಸ್ಸುಃ 47 ವರ್ಷ,
ವಾಸಃ ಸಂತೊಳ್ಳಿ ಗ್ರಾಮ,
ಶಿರಸಿ ತಾಲ್ಲೂಕು, ಉತ್ತರಕನ್ನಡ ಜಿಲ್ಲೆ.

**(ಆರೋಪಿತರಿಗೆ ಶ್ರೀ.ಡಿ.ಕೆ.ಪಿ., ವಕೀಲರು)**

| | | |
|---|---|---|
| 1. | ಕೃತ್ಯ ನಡೆದ ದಿನಾಂಕ | 18.06.2025 |
| 2. | ಕೃತ್ಯ ವರದಿ ಮಾಡಿದ ದಿನಾಂಕ | 18.06.2025 |
| 3. | ಆರೋಪಿಯನ್ನು ಬಂಧಿಸಿದ ದಿನಾಂಕ | - |
| 4. | ಫಿರ್ಯಾದಿದಾರರನ ಹೆಸರು | ಜಗದೀಶ ಬಿನ್ ಬಂಗಾರಪ್ಪ ಗೌಡ |
| 5. | ಸಾಕ್ಷಿಯ ವಿಚಾರಣೆಯ ಶುರವಾದ ದಿನಾಂಕ | 03.08.2026 |
| 6. | ಸಾಕ್ಷಿಯ ವಿಚಾರಣೆ ಮುಕ್ತಾಯ ದಿನಾಂಕ | 03.08.2026 |
| 7. | ಕೃತ್ಯ ವಿವರ | ಭಾ.ನ್ಯಾ.ಸಂ. ಕಲಂ 329(3),118(1), 115(2), 351(2) ಸಹಕಲಂ 3(5). |
| 8. | ನ್ಯಾಯಾಧೀಶರ ಅಭಿಪ್ರಾಯ | ಆರೋಪಿತರನು ದೋಷಮುಕ್ತಗೊಳಿಸಲಾಗಿದೆ. |

* * * * *

## -ತೀರ್ಪು-

ಆನವಟ್ಟಿ ಪೊಲೀಸ್ ಠಾಣೆಯ ಮುಖ್ಯ ಪೇದೆಯವರು, ಆರೋಪಿತರ ವಿರುದ್ಧ ಭಾ.ನ್ಯಾ.ಸಂ. ಕಲಂ. 329(3), 118(1), 115(2), 351(2) ಸಹಕಲಂ 3(5) ರಡಿಯಲ್ಲಿ ದೋಷಾರೋಪಣಾ ಪತ್ರವನ್ನು ಸಲ್ಲಿಸಿರುತ್ತಾರೆ.

2. **<u>ಅಭಿಯೋಜನೆಯ ಮೊಕದ್ದಮೆಯ ಸಂಕ್ಷಿಪ್ತ ಸಾರಾಂಶ ಈ ಕೆಳಗಿನಂತಿರುತ್ತದೆ.</u>**

ದಿನಾಂಕ 18.06.2025 ರಂದು ಬೆಳಿಗೆ 10-00 ಗಂಟೆ ಸಮಯದಲಿ, ಸೊರಬ ತಾಲೂಕು ಆನವಟ್ಟಿ ಪೊಲೀಸ್ ಠಾಣಾ ವ್ಯಾಪ್ತಿಯ ಸೂರಣಗಿ ಗ್ರಾಮದ ಸ.ನಂ.93/1 ರ ಅಡಿಕೆ ತೋಟದ ಶೀಲಮ್ಮ, ಲಿಂಗರಾಜಗೌಡ, ಜಗದೀಶಗೌಡ, ಸಿದ್ದಲಿಂಗಪ್ಪಗೌಡ ಮತ್ತು ಸುಜಾತಾ ರವರ ಜಂಟಿ ಖಾತೆಯಲ್ಲಿರುವ ಜಮೀನಿಗೆ 1 ರಿಂದ 4 ನೇ ಆರೋಪಿತರು ಅತಿಕ್ರಮ ಪ್ರವೇಶ ಮಾಡಿದವರೇ ಏಕಾಏಕಿ 2 ನೇ ಆರೋಪಿಯು ಚಾಸಾ.1 ರವರಿಗೆ ದೋಣ್ಣೆಯಿಂದ ಹೊಡೆಯಲು ಬಂದಿದ್ದು, ಆಗ ಅವರು ತಪ್ಪಿಸಿಕೊಳ್ಳಲು ಹೋಗಿ ಕೈ ಮುಂದೆ ಚಾಚಿದಾಗ ದೊಣ್ಣೆಯು ಅವರ ಬಲಮುಂಗೈಗೆ ಬಿದ್ದು ಸಾಮಾನ್ಯ ಸ್ವರೂಪದ ಒಳನೋವುಂಟು ಆಗಿದ್ದು, ಅದೇ ಸಮಯದಲ್ಲಿ 1 ಮತ್ತು 3 ನೇ ಆರೋಪಿತರು ಚಾಸಾ.1 ರವರ ಕೈ ಹಿಡಿದು ತಿರುವಿ ಕೈಗಳಿಂದ ಮೈಕೈಗೆ ಹೊಡೆದು ಸಾಮಾನ್ಯ ಸ್ವರೂಪದ ಒಳನೋವುಂಟು ಮಾಡಿರುತ್ತಾರೆ. ಅಷ್ಟರಲ್ಲಿ ಚಾಸಾ.2 ರವರು ಚಾಸಾ.1 ರವರನ್ನು ಬಿಡಿಸಿಕೊಳ್ಳಲು ಬಂದಾಗ 4 ನೇ ಆರೋಪಿಯು ಚಾಸಾ.2 ರವರನ್ನು ಹಿಡಿದು ಎಳೆದಾಡಿ ಅವರ ಭುಜಗಳಿಗೆ ಸಾಮಾನ್ಯ ಸ್ವರೂಪದ ಒಳನೋವುಂಟು ಮಾಡಿರುತ್ತಾರೆ. ನಂತರ ಚಾಸಾ.3 ಮತ್ತು 4 ರವರು ಬಂದು ಗಲಾಟೆ ಬಿಡಿಸಿದ್ದು, ಆಗ 1 ನೇ ಆರೋಪಿಯು ವಾಪಸ್ಸು ಹೋಗುವಾಗ ನಿಮ್ಮ ಇಂಜಕ್ಷನ್ ಆರ್ಡರ್ ನನಗೇನು ಮಾಡುವುದಿಲ್ಲ., ನಾನು ಯಾವ ಕೋರ್ಟ್ ಕಚೇರಿಗೂ ಹೆದರುವುದಿಲ್ಲ ಅಂತಾ ಹೇಳಿ ಇನ್ನೊಂದು ಸಾರಿ ಈ ಜಮೀನಿಗೆ ಕಾಲಿಟ್ಟರೆ ನಿಮ್ಮನ್ನು ಜೀವ ಸಹಿತ ಬಿಡುವುದಿಲ್ಲವೆಂದು ಜೀವ ಬೆದರಿಕೆ ಹಾಕಿರುವುದು ತನಿಖೆ ಮೂಲಕ ಸಾಬೀತುಪಡಿಸುವುದಾಗಿ ಆನವಟ್ಟಿ ಪೋಲಿಸರು ಆರೋಪಿತರ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

3. ಆರೋಪಿತರ ವಿರುದ್ಧ ದಾಖಲಿಸಿದ ಅಪರಾಧಗಳ ಕುರಿತ ಸಂಜ್ಞೆಯನ್ನು ತೆಗೆದುಕೊಂಡು ಸಮನ್ಸ್ ಜಾರಿ ಮಾಡಿರುತ್ತಾರೆ. ಆರೋಪಿತರು ತಮ್ಮ ವಕೀಲರ ಮುಖಾಂತರ ಹಾಜರಾಗಿ ಜಾಮೀನು ಪಡೆದು ದಿಃ12.01.2026 ರ ನಿರ್ದೇಶನದ ಮೇರೆಗೆ ಅಭಿಯೋಜನೆ ದಾಖಲೆಗಳನ್ನು ಆರೋಪಿತರಿಗೆ ನೀಡಲಾಗಿರುತ್ತದೆ. ನಂತರ ಆರೋಪಣೆಯನ್ನು ಆರೋಪಿತರಿಗೆ ಓದಿ ಹೇಳಲಾಗಿ, ಆರೋಪಿತರು ಯಾವುದೇ ತಪ್ಪು ಮಾಡಿರುವುದಿಲ್ಲ ಎಂದು ತಿಳಿಸಿದ್ದು, ವಿಚಾರಣೆಯಾಗಬೇಕೆಂದು ಕೋರಿಕೊಂಡಿರುತ್ತಾರೆ. ಆರೋಪಿತರು ತಮ್ಮ ಪರವಾಗಿ ವಕೀಲರನ್ನು ನೇಮಿಸಿಕೊಂಡು ಪ್ರಕರಣವನ್ನು

ವಿರೋಧಿಸಿರುತ್ತಾರೆ. ನಂತರ ಪ್ರಕರಣವನ್ನು ಅಭಿಯೋಜನೆಯ ಸಾಕ್ಷಿಗೆ ಮುಂದೂಡಲಾಯಿತು.

4. ತನಿಖಾಧಿಕಾರಿಗಳು ತನಿಖಾ ಕಾರ್ಯ ಪೂರ್ಣಗೊಳಿಸಿ ನ್ಯಾಯಾಲಯಕ್ಕೆ ತನಿಖಾ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ್ದು, ನ್ಯಾಯಾಲಯ ಭಾ.ನ್ಯಾ.ಸಂ. ಕಲಂ 329(3), 118(1), 115(2), 351(2) ಸಹಕಲಂ 3(5) ರಡಿಯಲ್ಲಿ ಆರೋಪಕ್ಕೆ ಸಂಜ್ಞೇಯತೆಯನ್ನು ತೆಗೆದುಕೊಂಡು, ನಂತರ ಭಾರತೀಯ ನಾಗರಿಕ ಸುರಕ್ಷಾ ಸಂಹಿತಾ ಕಲಂ. 230 ರಂತೆ ಆರೋಪಿತರಿಗೆ ದೋಷಾರೋಪಣಾ ಪಟ್ಟಿಯ ನಕಲನ್ನು ಜಾರಿಗೊಳಿಸಿದೆ. ದೋಷಾರೋಪಣೆಯನ್ನು ರಚಿಸುವ ಪೂರ್ವದಲ್ಲಿ ವಾದವನ್ನು ಆಲಿಸುತ್ತಾ (Heard before charge) ಆದರೆ ಆರೋಪಿತರನ್ನು ದೋಷಾರೋಪಣೆ ರಚಿಸುವ ಪೂರ್ವದಲ್ಲಿಯೇ ವಿಮೋಚನೆ ಮಾಡಲು ಯಾವುದೇ ಸಕಾರಣಗಳು ಈ ನ್ಯಾಯಾಲಯಕ್ಕೆ ಕಂಡು ಬರದ ಕಾರಣ ದೋಷಾರೋಪಣೆಯನ್ನು ರಚಿಸಲಾಯಿತು.

5. ಆರೋಪಿತರ ವಿರುದ್ಧ ಭಾ.ನ್ಯಾ.ಸಂ. ಕಲಂ 329(3), 118(1), 115(2), 351(2) ಸಹಕಲಂ 3(5) ರಡಿಯಲ್ಲಿ ಆರೋಪಕ್ಕೆ ದೋಷಾರೋಪಣೆಯನ್ನು ರಚಿಸಿ ಓದಿ, ಆರೋಪಿತರಿಗೆ ತಿಳಿಯುವ ಭಾಷೆಯಲ್ಲಿ ವಿವರಿಸಿ ಹೇಳಿದ್ದು, ಆರೋಪಿತರು ತಾವು ತಪ್ಪು ಮಾಡಿಲ್ಲ, ವಿಚಾರಣೆಯಾಗಬೇಕೆಂದು ಉತ್ತರಿಸುತ್ತಾರೆ.

6. ಅಭಿಯೋಜನೆಯನ್ನು ಆರೋಪಿತರ ವಿರುದ್ಧದ ಆಪಾಧನೆಯನ್ನು ರುಜುವಾತುಪಡಿಸಲು ಒಟ್ಟು 10 ಜನ ಸಾಕ್ಷಿದಾರರಲ್ಲಿ 03 ಸಾಕ್ಷಿದಾರರನ್ನು ಫ್ರಾಸಾ.1 ರಿಂದ 3 ರಂತೆ ವಿಚಾರಣೆಗೆ ಒಳಪಡಿಸಿ, ಒಟ್ಟು 7 ದಾಖಲೆಗಳನ್ನು ನಿಪಿ.1 ರಿಂದ 7 ಎಂದು ದಾಖಲಾತಿಗಳನ್ನು ಗುರುತಿಸಿಕೊಂಡಿರುತ್ತಾರೆ.

7. ಅಭಿಯೋಜನೆಯ ಪರ ಸಾಕ್ಷಿ ವಿಚಾರಣೆ ಮುಗಿಸಿಕೊಂಡ ನಂತರ ಆರೋಪಿಯನ್ನು ಭಾರತೀಯ ನಾಗರಿಕ ಸುರಕ್ಷಾ ಸಂಹಿತಾ ಕಲಂ. 351 ರಡಿಯಲ್ಲಿ ಪ್ರಶ್ನಿಸಿ, ಹೇಳಿಕೆಯನ್ನು ದಾಖಲಿಸುವ ಹಂತವನ್ನು ಊರ್ಜಿಸಲಾಗಿದೆ.

8. ಉಭಯತರ ವಾದ ಆಲಿಸಿದ್ದು ಹಾಗೂ ಕಡತವನ್ನು ಕೂಲಂಕುಷವಾಗಿ ಪರಿಶೀಲಿಸಲಾಯಿತು.

9. ಈ ಕೆಳಗಿನ ಅಂಶಗಳನ್ನು ಈ ನ್ಯಾಯಾಲಯದ ಪರ್ಯಾವಲೋಚನೆಗೆ ಉದ್ಭವಿಸಿರುತ್ತದೆ.

**ಅಂಶಗಳು**

**ಅಂಶಃ 1** ದಿನಾಂಕ 18.06.2025 ರಂದು ಬೆಳಿಗ್ಗೆ 10.00 ಗಂಟೆ ಸಮಯದಲ್ಲಿ ಸೊರಬ ತಾಲ್ಲೂಕು, ಆನವಟ್ಟಿ ಪೊಲೀಸ್ ಠಾಣಾ ವ್ಯಾಪ್ತಿಯ ಸೂರಣಗಿ ಗ್ರಾಮದ ಸ.ನಂ.93/1 ರ ಅಡಿಕೆ ತೋಟದ ಶೀಲಮ್ಮ, ಲಿಂಗರಾಜಗೌಡ, ಜಗದೀಶಗೌಡ ಮತ್ತು ಸುಜಾತಾರವರ ಜಂಟಿ ಖಾತೆಯಲ್ಲಿರುವ ಜಮೀನಿಗೆ ಆರೋಪಿತರು ಅಪರಾಧ ಮಾಡುವ ಸಮಾನ ಉದ್ದೇಶದಿಂದ ಅತಿಕ್ರಮ ಪ್ರವೇಶ ಮಾಡಿದ್ದು, ಆ ಮೂಲಕ ಭಾ. ನ್ಯಾ. ಸಂ. ಕಲಂ. 329(3) ಸಹಕಲಂ. 3(5) ರ ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುವರೆಂದು ಅಭಿಯೋಜನೆಯು ಸಂಶಯಾತೀತವಾಗಿ ಸಾಬೀತುಪಡಿಸುತ್ತಾರೆಯೇ?

**ಅಂಶಃ 2** ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿತರು ಅಪರಾಧ ಮಾಡುವ ಸಮಾನ ಉದ್ದೇಶದಿಂದ, 2 ನೇ ಆರೋಪಿಯು ಚಾಸಾ.1 ರವರಿಗೆ ದೊಣ್ಣೆಯಿಂದ ಹೊಡೆಯಲು ಬಂದಾಗ ಚಾಸಾ.1 ರವರು ತಪ್ಪಿಸಿಕೊಳ್ಳಲು ಹೋಗಿ ಕೈ ಮುಂದೆ ಚಾಚಿದಾಗ ದೊಣ್ಣೆಯು ಬಲಮುಗೈಗೆ ಬಿದ್ದು, ಸಾಮಾನ್ಯ ಸ್ವರೂಪದ ಒಳನೋವುಂಟು ಮಾಡಿದ್ದು, ಆ ಮೂಲಕ ಭಾ. ನ್ಯಾ. ಸಂ. ಕಲಂ. 118(1) ಸಹಕಲಂ. 3(5) ರ ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುವರೆಂದು ಅಭಿಯೋಜನೆಯು ಸಂಶಯಾತೀತವಾಗಿ ಸಾಬೀತುಪಡಿಸುತ್ತಾರೆಯೇ?

**ಅಂಶಃ3** ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿತರು ಅಪರಾಧ ಮಾಡುವ ಸಮಾನ ಉದ್ದೇಶದಿಂದ, 4 ನೇ ಆರೋಪಿಯು ಚಾಸಾ.2 ರವರನ್ನು ಹಿಡಿದು ಎಳೆದಾಡಿ ಭುಜಗಳಿಗೆ ಸಾಮಾನ್ಯ ಸ್ವರುಪದ ಒಳನೋವುಂಟು ಮಾಡಿದ್ದು, ಆ ಮೂಲಕ ಭಾ. ನ್ಯಾ. ಸಂ. ಕಲಂ. 115(2) ಸಹಕಲಂ. 3(5) ರ ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುವರೆಂದು ಅಭಿಯೋಜನೆಯು ಸಂಶಯಾತೀತವಾಗಿ ಸಾಬೀತುಪಡಿಸುತ್ತಾರೆಯೇ?

**ಅಂಶಃ4** ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿತರು ಅಪರಾಧ ಮಾಡುವ ಸಮಾನ ಉದ್ದೇಶದಿಂದ, 1 ನೇ

ಆರೋಪಿಯು ವಾಪಸ್ಸು ಹೋಗುವಾಗ ನಿಮ್ಮ ಇಂಜಕ್ಷನ್ ಆರ್ಡರ್ ನನಗೇನು ಮಾಡುವುದಿಲ್ಲ, ನಾನು ಯಾವ ಕೋರ್ಟ್ ಕಚೇರಿಗೂ ಹೆದುರುವುದಿಲ್ಲ ಅಂತಾ ಹೇಳಿ ಇನ್ನೊಂದು ಸಾರಿ ಈ ಜಮೀನಿಗೆ ಕಾಲಿಟ್ಟರೆ ನಿಮ್ಮನ್ನು ಜೀವ ಸಹಿತ ಬಿಡುವುದಿಲ್ಲವೆಂದು ಜೀವ ಬೆದರಿಕೆ ಹಾಕಿದ್ದು, ಆ ಮೂಲಕ ಭಾ. ನ್ಯಾ. ಸಂ. ಕಲಂ. 351(2) ಸಹಕಲಂ. 3(5) ರ ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುವರೆಂದು ಅಭಿಯೋಜನೆಯು ಸಂಶಯಾತೀತವಾಗಿ ಸಾಬೀತುಪಡಿಸುತ್ತಾರೆಯೇ?

**ಅಂಶ:5** ಏನು ಆದೇಶ?

10. ಈ ನ್ಯಾಯಾಲಯದ ತೀರ್ಮಾನಕ್ಕೆ ಉದ್ಭವಿಸಿರುವ ಮೇಲ್ಕಂಡ ಅಂಶಗಳಿಗೆ ಕೆಳಕಂಡ ಕಾರಣಗಳಿಗಾಗಿ, ಈ ಕೆಳಕಂಡಂತೆ ಈ ನ್ಯಾಯಾಲಯವು ಉತ್ತರಿಸಿದೆ.

ಅಂಶಃ **1 ನಕಾರಾತ್ಮಕವಾಗಿ.**

ಅಂಶಃ **2 ನಕಾರಾತ್ಮಕವಾಗಿ.**

ಅಂಶಃ **3 ನಕಾರಾತ್ಮಕವಾಗಿ.**

ಅಂಶಃ **4 ನಕಾರಾತ್ಮಕವಾಗಿ.**

ಅಂಶಃ **5** ಅಂತಿಮ ಆದೇಶದಂತೆ ಈ ಕೆಳಕಂಡ ಕಾರಣಗಳಿಗಾಗಿ.

## ಕಾರಣಗಳು

11. **ಅಂಶಃ 1 ರಿಂದ 4:-** ಈ ಎಲ್ಲಾ ಅಂಶಗಳು ಒಂದೇ ಘಟನೆಯ ಭಾಗವಾಗಿದ್ದು, ಸಾಕ್ಷ್ಯದ ಚರ್ಚೆಯ ಪುನರಾವರ್ತನೆಯನ್ನು ತಪ್ಪಿಸುವ ಸಲುವಾಗಿ ಏಕ ಚರ್ಚೆಗೆ ತೆಗೆದುಕೊಳ್ಳಲಾಗಿದೆ.

ಈ ಪ್ರಕರಣದಲ್ಲಿ ಆರೋಪಿತರ ವಿರುದ್ಧ ಮಾಡಲಾದ ಆಪಾಧನೆಗಳನ್ನು ರುಜುವಾತುಪಡಿಸುವ ಸಂಪೂರ್ಣ ಹೊಣೆಗಾರಿಕೆಯು ಅಭಿಯೋಜಕರ ಮೇಲಿದ್ದು ಅದಕ್ಕಾಗಿ ಅಭಿಯೋಜಕರು ಸಾಕಷ್ಟು ನಂಬಲಾರ್ಹವಾದ ಸಾಕ್ಷ್ಯ ಪುರಾವೆಗಳನ್ನು ಪೂರೈಸುವ ಹೊಣೆಗಾರಿಕೆಯು ಹಾಗೂ ಆರೋಪಿತರ ಆರೋಪಗಳನ್ನು ನಿಸ್ಸಂಶಯವಾಗಿ ರುಜುವಾತುಪಡಿಸುವ ಹೊಣೆಗಾರಿಕೆಯು ಅಭಿಯೋಜಕರ ಮೇಲಿರುತ್ತದೆ.

12. ಭಾರತೀಯ ಸಾಕ್ಷ್ಯ ಅಧಿನಿಯಮ, 1822 ಕಲಂ 101 ರಂತೆ ಆರೋಪಿತರ ವಿರುದ್ಧವಿರುವ ಅಪರಾಧಗಳನ್ನು ರುಜುವಾತುಪಡಿಸುವ ಭಾರ ಅಭಿಯೋಜನೆಯ ಮೇಲೆ ಇದ್ದು, ಅಭಿಯೋಜನೆಯವರು ಆರೋಪಿತರ ಮೇಲೆ ಇರುವ ಅಪರಾಧಗಳನ್ನು ಯಾವ ರೀತಿ ರುಜುವಾತುಪಡಿಸಿದ್ದಾರೆ ಎಂಬುವುದನ್ನು ಪರಿಶೀಲಿಸಬೇಕಾಗುತ್ತದೆ.

13. ಈ ಪ್ರಕರಣದಲ್ಲಿ ಅಭಿಯೋಜಕರು ಹಾಜರುಪಡಿಸಿರುವ ಮೌಖಿಕ ಹಾಗೂ ದಾಖಲಾತಿ ಸಾಕ್ಷ್ಯಗಳನ್ನು ಸಂಕ್ಷಿಪ್ತವಾಗಿ ಪರಿಶೀಲಿಸಿದಾಗ ಅಭಿಯೋಜನೆಯ ಪ್ರಕರಣದ ಪರ ಫ್ರಾಸಾ.1 ರವರು ಫಿರ್ಯಾದಿ, ಫ್ರಾಸಾ.2 ರವರು ಗಾಯಾಳು ಹಾಗೂ ಫ್ರಾಸಾ.3 ರವರು ಪ್ರತ್ ಯಕ್ಷ ಸಾಕ್ಷಿದಾರರಾಗಿದ್ದು, ಫ್ರಾಸಾ.1 ರವರು ತಮ್ಮ ನುಡಿ ಸಾಕ್ಷ್ಯದಲ್ಲಿ, ತನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ಆರೋಪಿ ಮತ್ತು ತಮ್ಮ ನಡುವೆ ಯಾವುದೇ ಗಲಾಟೆ ಆಗಿರುವುದಿಲ್ಲ. ಪೋಲಿಸರ ಕೋರಿಕೆಯ ಮೇರೆಗೆ ಕೆಲವು ದಾಖಲೆಗಳಿಗೆ ಸಹಿ ಹಾಕಿರುವುದಾಗಿ ಸಾಕ್ಷಿ ನುಡಿದಿದ್ದು, ಸಾಕ್ಷಿಯು ನಿಪಿ.1 ದೂರನ್ನು ಮತ್ತು ನಿಪಿ.2 ಘಟನಾ ಸ್ಥಳ ಪಂಚನಾಮೆಯನ್ನು ಹಾಗೂ ಅವುಗಳಲ್ಲಿ ನಿಪಿ.1 ಎ ಮತ್ತು ನಿಪಿ.2(ಎ ಮತ್ತು ಬಿ) ರಂತೆ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದರಲ್ಲಿ ಬರೆದಿರುವ ವಿಚಾರಗಳ ಬಗ್ಗೆ ತನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಮುಂದುವರೆದು, ಸಾಕ್ಷಿಯು ನಿಪಿ.3 ಮತ್ತು 4 ಎರಡು ಭಾವಚಿತ್ರಗಳನ್ನು ನೋಡಿ ಗುರುತಿಸಿದ್ದು, ಅವುಗಳಲ್ಲಿ ತಮ್ಮ ಇರುವಿಕೆಯನ್ನು ನೋಡಿ ಗುರುತಿಸಿರುತ್ತಾರೆ. ಆದರೆ ಅವುಗಳನ್ನು ಯಾವ ಕಾರಣಕ್ಕಾಗಿ ತೆಗೆದಿರುತ್ತಾರೆ ಎಂದು ತನಗೆ ಗೊತ್ತಿಲ್ಲ. ನಿಪಿ.5 ರಂತೆ ಪೊಲೀಸರ ಮುಂದೆ ಯಾವುದೇ ಮುಂದುವರೆದ ಹೇಳಿಕೆಯನ್ನು ನೀಡಿರುವುದಿಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ. ಫ್ರಾಸಾ.1 ರವರು ಅಭಿಯೋಜನೆಯ ಪ್ರಕರಣದ ವಿರುದ್ಧವಾಗಿ ಸಾಕ್ಷಿಯನ್ನು ನುಡಿದಿದ್ದು, ಸದರಿ ಸಾಕ್ಷಿಯನ್ನು ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಿದಾಗಲೂ ಸಹ ಅಭಿಯೋಜನೆ ಪ್ರಕರಣಕ್ಕೆ ಸಹಾಯವಾಗುವಂತೆ ಯಾವುದೇ ಸಾಕ್ಷಿಯನ್ನು ನುಡಿದಿರುವುದಿಲ್ಲ.

14. ಅದೇ ರೀತಿ ಫ್ರಾಸಾ.2 ರವರು ಈ ಪ್ರಕರಣದ ಗಾಯಾಳುವಾಗಿದ್ದು, ತಮ್ಮ ನುಡಿ ಸಾಕ್ಷ್ಯದಲ್ಲಿ, ಚಾಸಾ-1 ತನ್ನ ಗಂಡ. ಚಾಸಾ-3 ಮತ್ತು 4 ತನ್ನ ಭಾವನ ಮಕ್ಕಳು. ತನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ಆರೋಪಿ ಮತ್ತು ತಮ್ಮ ನಡುವೆ ಯಾವುದೇ ಗಲಾಟೆ ಆಗಿರುವುದಿಲ್ಲ. ನಿಪಿ.6 ರಂತೆ ತಾನು ಪೊಲೀಸರ ಮುಂದೆ ಯಾವುದೇ

ಹೇಳಿಕೆಯನ್ನು ನೀಡಿರುವುದಿಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ. ಅದೇ ರೀತಿ ಫ್ರಾಸಾ.3 ರವರು ಈ ಪ್ರಕರಣದ ಪ್ರತ್ಯಕ್ಷ ಸಾಕ್ಷಿದಾರರಾಗಿದ್ದು, ತಮ್ಮ ನುಡಿ ಸಾಕ್ಷ್ಯದಲ್ಲಿ, ಚಾಸಾ-1 ಮತ್ತು 2 ತನ್ನ ಚಿಕ್ಕಪ್ಪ ಮತ್ತು ಚಿಕ್ಕಮ್ಮನಾಗಿದ್ದು, ತನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ಆರೋಪಿ ಮತ್ತು ತಮ್ಮ ನಡುವೆ ಯಾವುದೇ ಗಲಾಟೆ ಆಗಿರುವುದಿಲ್ಲ. ನಿಪಿ.7 ರಂತೆ ತಾನು ಪೊಲೀಸರ ಮುಂದೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ. ಸದರಿ ಸಾಕ್ಷಿಗಳು ಅಭಿಯೋಜನೆಯ ಪ್ರಕರಣದ ವಿರುದ್ಧವಾಗಿ ಸಾಕ್ಷಿಯನ್ನು ನುಡಿದಿದ್ದು, ಸದರಿ ಸಾಕ್ಷಿಗಳನ್ನು ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಪ್ರತಿಕೂಲ ಸಾಕ್ಷಿಗಳು ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಿದಾಗಲೂ ಸಹ ಅಭಿಯೋಜನೆ ಪ್ರಕರಣಕ್ಕೆ ಸಹಾಯವಾಗುವಂತೆ ಯಾವುದೇ ಸಾಕ್ಷಿಯನ್ನು ನುಡಿದಿರುವುದಿಲ್ಲ. ಆದರೆ ಈ ಪ್ರಕರಣದ ಫ್ರಾಸಾ.1 ರಿಂದ 3 ರವರು ಆರೋಪಿತರೊಂದಿಗೆ ರಾಜಿ ಮಾಡಿಕೊಂಡಿರುವುದಾಗಿ ಒಪ್ಪಿಕೊಂಡಿರುತ್ತಾರೆ.

15. ಅಭಿಯೋಜನಾ ಪ್ರಕರಣದಲ್ಲಿ ಫ್ರಾಸಾ.1 ರಿಂದ 3 ರವರು ಈ ಪ್ರಕರಣದ ಪಿರ್ಯಾದಿ, ಗಾಯಾಳು ಹಾಗೂ ಪ್ರತ್ಯಕ್ಷ ಸಾಕ್ಷಿದಾರರಾಗಿದ್ದು, ತಮ್ಮ ನುಡಿ ಸಾಕ್ಷ್ಯದಲ್ಲಿ ಅಭಿಯೋಜನೆಯ ಪ್ರಕರಣದ ವಿರುದ್ಧವಾಗಿ ಸಾಕ್ಷಿ ನುಡಿದ ಕಾರಣ ಉಳಿದ ಸಾಕ್ಷ್ಯಾದಾರರನ್ನು ವಿಚಾರಣೆ ಮಾಡಿದರೂ ಸಹ ಅಭಿಯೋಜನೆಯ ಪ್ರಕರಣಕ್ಕೆ ಸಹಾಯವಾಗುವುದಿಲ್ಲವೆಂದು ಕಂಡುಬಂದ ಕಾರಣ, ನ್ಯಾಯಾಲಯವು ಸಹಾಯಕ ಸರ್ಕಾರಿ ಅಭಿಯೋಜಕರ ಉಳಿದ ಸಾಕ್ಷ್ಯಾದಾರರಿಗೆ ಸಮನ್ಸ್ ನೀಡಬೇಕೆಂಬ ಮನವಿಯನ್ನು ತಿರಸ್ಕರಿಸಿರುತ್ತದೆ. ಈ ಮೇಲ್ಕಂಡ ಕಾರಣಗಳಿಂದ ಆರೋಪಿತರು ಮೇಲ್ಕಂಡ ಆಪಾಧನೆಗಳನ್ನು ಮಾಡಿರುತ್ತಾರೆ ಎಂದು ಅಭಿಯೋಜಕರು ಯಾವುದೇ ಸಂದೇಹಕ್ಕೆ ಆಸ್ಪದವಿಲ್ಲದಂತೆ ನಂಬಲಾರ್ಹವಾದ ಹಾಗೂ ಕಾನೂನು ಬದ್ಧವಾದ ಸಾಕ್ಷ್ಯಾದಾರಗಳಿಂದ ರುಜುವಾತುಪಡಿಸಲಾಗದ ಕಾರಣ, ಸಂಶಯದ ಲಾಭವನ್ನು ಆರೋಪಿತರಿಗೆ ನೀಡಿ, ಈ ನ್ಯಾಯಾಲಯವು **ಅಂಶ 1 ರಿಂದ 4 ಅನ್ನು ನಕಾರಾತ್ಮಕವಾಗಿ** ಉತ್ತರಿಸಿರುತ್ತದೆ.

16. **ಅಂಶ ನಂ.5:-** 1 ರಿಂದ 4 ಅಂಶಗಳಿಗೆ ನಕಾರಾತ್ಮಕವಾಗಿ ಉತ್ತರಿಸಿದ ಕಾರಣಗಳಿಂದ, ಈ ನ್ಯಾಯಾಲಯವು ಈ ಕೆಳಗಿನಂತೆ ಆದೇಶಿಸುತ್ತದೆ.

## -ಆದೇಶ -

ಭಾರತೀಯ ನಾಗರಿಕ ಸುರಕ್ಷಾ ಸಂಹಿತಾ ಕಲಂ. 271(1) ರಡಿಯಲ್ಲಿ ಪ್ರದತ್ತವಾಗಿರುವ ಅಧಿಕಾರದ ಮೇರೆಗೆ, ಆರೋಪಿತರನ್ನು ಭಾ.ನ್ಯಾ.ಸಂ. ಕಲಂ 329(3), 118(1), 115(2), 351(2) ಸಹಕಲಂ 3(5) ರಡಿಯಲ್ಲಿನ ಶಿಕ್ಷಾರ್ಹ ಅಪರಾಧಗಳಿಂದ ದೋಷಮುಕ್ತಗೊಳಿಸಿ ಬಿಡುಗಡೆಗೆ ಆದೇಶಿಸಲಾಗಿದೆ.

ಆರೋಪಿತರ ಮತ್ತು ಅವರ ಪರ ಜಾಮೀನುದಾರರು ಬರೆದುಕೊಟ್ಟಿರುವ ಜಾಮೀನಿನ ಮುಚ್ಚಳಿಕೆ ಪತ್ರಗಳನ್ನು ರದ್ದುಪಡಿಸಲಾಗಿದೆ.

*(ತೀರ್ಪಿನ ಉಕ್ತಲೇಖನವನ್ನು ಶೀಘ್ರಲಿಪಿಗಾರರರಿಗೆ ಕೊಟ್ಟು ಅದನ್ನು ಅವರಿಂದ ಬೆರಳಚ್ಚುಪಡಿಸಿ ಗಣಕೀಕೃತಗೊಳಿಸಿದ್ದು, ನಂತರ ತಿದ್ದುಪಡಿ ಮಾಡಿ, ಸಹಿ ಮಾಡಿ ಇಂದು ಅಂದರೆ 03 ನೇ ಆಗಸ್ಟ್ 2026 ರಂದು ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.)*

**(ರಾಜು. ಕೃ .ಶೇಡಬಾಳ್ಕರ್)**
ಸಿ/ಸಿ I ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂಡಾಧಿಕಾರಿಗಳು ಸೊರಬ.

## ಅನುಸೂಚಿ

**1. ಅಭಿಯೋಜನೆಯ ಪರ ವಿಚಾರಣೆ ಮಾಡಿದ ಸಾಕ್ಷಿದಾರರು:**

ಪ್ರಾಸಾ.1 : ಜಗದೀಶ ಗೌಡ ಬಿನ್ ಬಂಗಾರಪ್ಪ ಗೌಡ

ಪ್ರಾಸಾ.2 : ಅನುಪಮ ಕೋಂ ಜಗದೀಶ ಗೌಡ

ಪ್ರಾಸಾ.3 : ಶಿವರಾಜ ಬಿನ್ ಜಯಶೀಲ ಗೌಡ

**2. ಅಭಿಯೋಜನೆಯ ಪರ ಗುರುತಿಸಲಾದ ದಾಖಲಾತಿಗಳ ಪಟ್ಟಿ:**

ನಿಪಿ-1 : ದೂರು.

ನಿಪಿ-1(ಎ) : ಪಿಡಬ್ಲ್ಯೂ.1 ರವರ ಸಹಿ.

| | | |
|---|---|---|
| ನಿಪಿ-2 | ಃ | ಘಟನಾ ಸ್ಥಳದ ಪಂಚನಾಮೆ. |
| ನಿಪಿ-2(ಎ) | ಃ | ಪಿಡಬ್ಲ್ಯೂ1 ರವರ ಸಹಿ. |
| ನಿಪಿ-3&4 | ಃ | ಎರಡು ಭಾವಚಿತ್ರಗಳು. |
| ನಿಪಿ-5 | ಃ | ಪಿ.ಡಬ್ಲ್ಯೂ1 ರವರ ಹೇಳಿಕೆ. |
| ನಿಪಿ-6 | ಃ | ಪಿ.ಡಬ್ಲ್ಯೂ2 ರವರ ಹೇಳಿಕೆ. |
| ನಿಪಿ-7 | ಃ | ಪಿ.ಡಬ್ಲ್ಯೂ3 ರವರ ಹೇಳಿಕೆ. |

**3. ಪ್ರತಿರಕ್ಷಣೆಯವರ ಪರವಾಗಿ ಮಾಡಿಸಿದ ಸಾಕ್ಷ್ಯಾದಾರರ ವಿವರಗಳುಃ**

-ಇಲ್ಲ-

**4. ಪ್ರತಿರಕ್ಷಣೆಯವರ ಪರವಾಗಿ ನಿಶಾನೆಗೊಳಪಡಿಸಿದ ದಾಖಲಾತಿಗಳ ವಿವರಗಳುಃ**

-ಇಲ್ಲ-

**5. ಅಭಿಯೋಜನೆಯ ಪರ ಅಮಾನತ್ತುಪಡಿಸಲಾದ ಮುದ್ದೆಮಾಲುಗಳ ಪಟ್ಟಿಃ**

-ಇಲ್ಲ-

**ಸಿ/ಸಿ I ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು ಸೊರಬ.**